

4



5



6





ಕೀಸ್ ವ್ಯೂ ಏರಿ, ಚಳಿಯಲ್ಲಿ ನಡುಗುತ್ತಾ ಸೂರ್ಯಾಸ್ತವನ್ನು ವೀಕ್ಷಿಸಿ, ಫೋಟೋ ಕ್ಲಿಕ್ಕಿಸಿದೆವು.

## ಏರಿಯಲ್ ಟ್ರ್ಯಾಮ್‌ವೇ

ಮರುದಿನ 30 ನಿಮಿಷಗಳ ಕಾರು ಪ್ರಯಾಣ ನಮ್ಮನ್ನು ಟ್ರ್ಯಾಮ್ ಕಾರಿನ ಪಾರ್ಕಿಂಗ್ ಪ್ರದೇಶಕ್ಕೆ ತಂದು ಬಿಟ್ಟಿತು. ಸಿಬ್ಬಂದಿಗಳ ಊಟದ ಸಮಯ–ವಾದ್ದರಿಂದ ಉಚಿತ ಸಾರಿಗೆ ನಿಲುಗಡೆಯಾಗಿತ್ತು. ರಜಾ ದಿನವಾದದ್ದರಿಂದ ನಮ್ಮ ಸರದಿಗೆ ಒಂದು ಘಂಟೆ ಕಾಯುವಂತಾಯಿತು.

80 ಜನರು ಪ್ರಯಾಣಿಸಬಹುದಾದ, ವೃತ್ತಾಕಾರದ, ಸಂಪೂರ್ಣವಾಗಿ ಗಾಜಿನಿಂದ ಆವೃತವಾದ, ನಿಂತಲ್ಲೇ ತಿರುಗುವ ಟ್ರಾಮನ್ನು ಪ್ರವೇಶಿಸಿದೆವು. ಹತ್ತು ನಿಮಿಷಗಳಲ್ಲಿ ಎರಡೂವರೆ ಮೈಲಿ ದೂರವನ್ನು ಕ್ರಮಿಸಿ ಎತ್ತರದ ಮೌಂಟ್ ಜಸಿಂಟೋ ಪರ್ವತವನ್ನು ಸೇರುವ ಈ ಸ್ವಿಸ್ ನಿರ್ಮಿತ ಟ್ರ್ಯಾಮ್ ಕಾರನ್ನು ಉತ್ತರ ಅಮೆರಿಕಾದ ಒಂದು ಅದ್ಭುತ ಎಂದೇ ಪರಿಗಣಿಸಲಾಗಿದೆ. 250 ಅಡಿ ಎತ್ತರದ 5 ಟವರ್‌ಗಳ ಮಧ್ಯೆ ಅಳವಡಿಸಲಾದ ಎರಡೂವರೆ ಮೈಲುದ್ದದ ಕೇಬಲ್ ಮೂಲಕ ಸಾಗುವ ಈ ಟ್ರ್ಯಾಮ್ ಕಾರ್, ಏರುವಾಗ ಎರಡು ಬಾರಿ ವೃತ್ತಾಕಾರವಾಗಿ ಚಲಿಸಿ, ಒಳಗಿರುವವರಿಗೆ ಸುತ್ತಮುತ್ತಲಿನ ಪ್ರಕೃತಿಯ ಸುಂದರ ನೋಟವನ್ನು ಒದಗಿಸುತ್ತದೆ.

ಮೆಲ್ಲನೆ ಏರುತ್ತಿದ್ದಂತೆ, ಮೊದಲು ಪಾಮ್ ಸ್ಪ್ರಿಂಗಿನ ಬಯಲು ಪ್ರದೇಶ, ವಿಂಡ್ ಮಿಲ್ಲುಗಳು, ಕಲ್ಲು ಬಂಡೆಗಳ ವಿರಳ ವೃಕ್ಷರಾಶಿ ಗೋಚರಿಸಿತು. ಕ್ರಮೇಣ ವಿರಳ ಕೊನಿಫರ್ ಮರಗಳು, ಹಿಮದ ರಾಶಿ ಕಂಡು ಬಂತು. ಇನ್ನೂ ಮೇಲೇರಿದಂತೆ ದೈತ್ಯ ಕೊನಿಫರ್ ಮರಗಳಿಂದ ಆವೃತವಾದ ಹಿಮ ಪರ್ವತ ಕಾಣಿಸಿತು. ಟ್ರಾಮಿಂದ ಹೊರಬಂದಂತೆ ಕಣ್ಣೆದುರೇ ಅಗಾಧ ಪ್ರಮಾಣದ ಹಿಮರಾಶಿಯ ದರ್ಶನವಾಯಿತು. ಕೊರೆಯುವ ಚಳಿಯಲ್ಲಿ ಕಾಂಕ್ರೀಟ್ ಕಾಲುದಾರಿಯಲ್ಲಿ ನಡೆದು, ದೈತ್ಯ ದೇವದಾರು ವೃಕ್ಷಗಳ ಬುಡದಲ್ಲಿ ಹಿಮದ